# ವಿಕಸಿತ ಭಾರತಕ್ಕಾಗಿ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಪರಿಕಲ್ಪನೆ ಮತ್ತು ಡಾ. ಬಿ. ಆರ್. ಅಂಬೇಡ್ಕರ್

**ಶಂಕರಪ್ಪ ಸತ್ಯಪ್ಪ ಲಗಳಿ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಸಿ. ಎಂ. ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯರಗಟ್ಟಿ, ಬೆಳಗಾವಿ.

DOI: https://doi.org/10.5281/zenodo.17297185

## ABSTRACT:

ಭಾರತದ ಸಂವಿಧಾನದ ಶಿಲ್ಪಿ "ಬಾಬಾಸಾಹೇಬ್" ಎಂದು ಜನಪ್ರಿಯವಾಗಿ ಕರೆಯಲ್ಪಡುವ ಭೀಮ್ ರಾವ್ ರಾಮ್‌ಜಿ ಅಂಬೇಡ್ಕರ್ ಅವರು ಶಿಕ್ಷಣತಜ್ಞ, ನ್ಯಾಯಶಾಸ್ತ್ರಜ್ಞ, ಸಮಾಜ ಸುಧಾರಕ, ಅರ್ಥಶಾಸ್ತ್ರಜ್ಞ ಮತ್ತು ಭಾರತೀಯ ಸಾಮಾಜಿಕ ರಚನೆಯನ್ನು ಸುಧಾರಿಸಲು ಪಟ್ಟುಬಿಡದೆ ಹೋರಾಡಿದ ಭಾರತದ ಶ್ರೇಷ್ಠ ರಾಜಕೀಯ ನಾಯಕರು. ಅವರು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಸಿದ್ಧರಾಗಿರುವ ದೂರದೃಷ್ಟಿಯ ವ್ಯಕ್ತಿಯಾಗಿದ್ದರು. ತಮ್ಮ ರಾಜಕೀಯ ಜೀವನದುದ್ದಕ್ಕೂ, ಅವರು ಸಮಾಜದ ಕಲ್ಯಾಣಕ್ಕಾಗಿ ವಿಶೇಷವಾಗಿ ಮಹಿಳೆಯರು, ಮತ್ತು ದೀನದಲಿತ, ಕಾರ್ಮಿಕರ ವರ್ಗಕ್ಕಾಗಿ ಕೆಲಸ ಮಾಡಿದರು. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಮತ್ತು ದಲಿತರ ಶೋಷಣೆ ನಿವಾರಣೆಗಾಗಿ ಹೋರಾಡಿದ ಅಗ್ರಗಣ್ಯ ಮಹಾನ್ ಭಾರತೀಯ ನಾಯಕರು. ಅಂಬೇಡ್ಕರ್ ಅವರು ಏಪ್ರಿಲ್ 14, 1891 ರಂದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬಾವಾಡೆ ಗ್ರಾಮದಲ್ಲಿ ಜನಿಸಿದರು. ಅವರು ಮಹೋವ್‌ನಲ್ಲಿ ಮೇಜರ್ ಸುಬೇದಾರ್ ಶ್ರೇಣಿಯ ಮಿಲಿಟರಿ ಅಧಿಕಾರಿ ಶ್ರೀ ರಾಮ್‌ಜಿ ಮಾಲೋಜಿ ಸಕ್ಪಾಲ್ ಮತ್ತು ಭೀಮಾಬಾಯಿ ಸಕ್ಪಾಲ್ ಅವರ ಪುತ್ರರಾಗಿದ್ದರು. ಅಂಬೇಡ್ಕರ್ ಅವರು ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟ ಮಹಾರ್ (ದಲಿತ) ಸಮುದಾಯದಲ್ಲಿ ಹುಟ್ಟಿ ಬೆಳೆದರು. ಸವರ್ಣೀಯರ ಶೋಷಣೆ ಮತ್ತು ಕೋಪ-ತಾಪಗಳ ಮಧ್ಯೆ ಬಾಲ್ಯ ಜೀವನ ಕಳೆದರು. 1897 ರಲ್ಲಿ ಅಂಬೇಡ್ಕರ್ ಅವರ ಕುಟುಂಬ ಮುಂಬೈಗೆ ಸ್ಥಳಾಂತರಗೊಂಡಿತು. ನಂತರ ಸತಾರಾದಲ್ಲಿ ಹೈಸ್ಕೂಲ್ ಮುಗಿಸಿ 1908 ರಲ್ಲಿ ಮೆಟ್ರಿಕ್ಯುಲೇಷನ್ ಪಾಸ್ ಮಾಡಿದರು. ಬಾಂಬೆಯ ಎಲ್ಫಿನ್‌ಸ್ಟೋನ್ ಕಾಲೇಜಿನಲ್ಲಿ 1912 ರಲ್ಲಿ ಬಿ. ಎ. ಪದವಿ ಪಡೆದರು. 'ಪ್ರಾಚೀನ ಭಾರತದಲ್ಲಿ ವಾಣಿಜ್ಯ ವ್ಯವಹಾರ' ಹಾಗೂ 'ಬ್ರಿಟಿಷ್ ಆಡಳಿತದಲ್ಲಿ ಭಾರತದ ಹಣಕಾಸಿನ ವ್ಯವಸ್ಥೆಯ ವಿಕಾಸ' ಎಂಬ ಪ್ರಬಂಧಗಳಿಗೆ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯ ಎಂ. ಎ. ಮತ್ತು ಪಿಎಚ್. ಡಿ. ಪದವಿ ನೀಡಿತು.

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರವನ್ನು ಅಧ್ಯಯನ ಮಾಡುವ ಮೂಲಕ ಲಂಡನ್ ವಿಶ್ವವಿದ್ಯಾಲಯದಿಂದ ಎಂ. ಎಸ್ಸಿ. ಮತ್ತು ಡಿ. ಎಸ್ಸಿ. ಪದವಿಗಳನ್ನು ಪಡೆದರು. ಲಂಡನ್ ಗ್ರೇಸ್ ಇನ್ ಲಾ ಕಾಲೇಜಿನಲ್ಲಿ ಕಾನೂನು ಅಧ್ಯಯನ ಮಾಡಿ 'ಬಾರ್ ಅಟ್ ಲಾ' ಪಡೆದರು. ಬಾಂಬೆಯ ಕಾಮರ್ಸ್ ಮತ್ತು ಕಾನೂನು ಕಾಲೇಜಿನಲ್ಲಿ ಅರ್ಥಶಾಸ್ತ್ರ, ಕಾನೂನು, ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು.

## KEYWORDS:

ಸಾಮಾಜಿಕ ಸಮಾನತೆ, ದಲಿತ ಜಾಗೃತಿ, ಸಂವಿಧಾನ ರಚನೆಯ ಶಿಲ್ಪಿ, ಸತ್ಯಾಗ್ರಹ, ರಾಜಕೀಯ ಸಾಮಾಜಿಕ ಉನ್ನತಿ, ಹಿಂದೂ ಕೋಡ್ ಬಿಲ್ ಮಂಡನೆ.

**ದಲಿತರ ಸಂಘಟನೆ**

ದಲಿತರನ್ನು ಸಾಮಾಜಿಕ ಮತ್ತು ರಾಜಕೀಯ ಜಾಗೃತಿ ಮೂಡಿಸಲು ಬಹಿಷ್ಕೃತ ಹಿತಕಾರಿಣಿ ಸಭಾ ಸ್ಥಾಪನೆ – 1924. ದಲಿತರಿಗೆ ಶಿಕ್ಷಣ, ವಸತಿ, ವಾಚನಾಲಯ ಸೌಲಭ್ಯ ಮತ್ತು ಜಾತಿ ಪದ್ಧತಿ ನಿರ್ಮೂಲನೆ, ದಲಿತ ಜಾಗೃತಿ, ಸಂಘಟನೆ, ಹೋರಾಟ ಗುಣ ಬೆಳೆಸುವುದು. ದಲಿತರನ್ನು ಭೌತಿಕ ಮತ್ತು ನೈತಿಕ ಉನ್ನತಿ ಮಾಡುವುದು. 1927 ರಲ್ಲಿ ಡಿಪ್ರೆಸ್ಡ್ ಕ್ಲಾಸ್ ಅಸೋಸಿಯೇಷನ್ ಮತ್ತು ದಲಿತ ಸಂಘರ್ಷ ಸಮಿತಿ ಸ್ಥಾಪನೆ. 1942 ರಲ್ಲಿ ದಲಿತ ವರ್ಗಗಳ ಅಖಿಲ ಭಾರತೀಯ ಅಧಿವೇಶನ ಸಂಘಟಿಸಿದರು.

**ಪತ್ರಿಕೆಗಳು ಮತ್ತು ದಲಿತ ಜಾಗೃತಿ**

ಅಸ್ಪೃಶ್ಯತೆ ವಿರುದ್ಧ ಹೋರಾಡಲು ಮತ್ತು ದಲಿತರನ್ನು ಜಾಗೃತಿಗೊಳಿಸಲು ಮೂಕ್ ನಾಯಕ್, ಬಹಿಷ್ಕೃತ ಭಾರತ್, ಮತ್ತು ಸಮತಾ, ಜನತಾ, ಪ್ರಬುದ್ಧ ಭಾರತ ಎಂಬ ಐದು ವಾರಪತ್ರಿಕೆಗಳನ್ನು ಪ್ರಕಟಿಸಿದರು. ಇಂಗ್ಲಿಷನಲ್ಲಿ ಸಮಾನತೆ ಎಂಬ ಪತ್ರಿಕೆ ಮತ್ತು ಸರಸ್ವತಿ ವಿಲಾಸ ಎಂಬ ಜರ್ನಲ್ ಹೊರಡಿಸಿದರು. ಈ ಮೇಲಿನ ಪತ್ರಿಕೆಗಳಲ್ಲಿ ದಲಿತರ ಮೇಲೆ ಸವರ್ಣೀಯರ ದೌರ್ಜನ್ಯ ಖಂಡಿಸಿ ಲೇಖನಗಳನ್ನು ಬರೆದರು. ಅವರ ಲೇಖನಗಳು ದಲಿತರ ಅಜ್ಞಾನ, ಬಡತನ, ದೌರ್ಬಲ್ಯ ನಿವಾರಣೆಗೆ ಸಹಾಯಕವಾದವು.

**ಮಹಡ್ ಚೌಡಾರ್ ಕೆರೆಯ ಹೋರಾಟ**

ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯ ಮಹಡ್ ಕೆರೆ ನೀರನ್ನು ಕುಡಿಯಲು ದಲಿತರ ಮೇಲೆ ನಿಷೇಧಿಸಲಾಗಿತ್ತು. ಮಹಾಡ್ ಪುರಸಭೆಯು 1927 ರಲ್ಲಿ ಯಾವುದೇ ಜಾತಿ ಭೇದವಿಲ್ಲದೆ ಎಲ್ಲ ಜನರಿಗೂ ಕೆರೆಯ ನೀರನ್ನು ಬಳಸಲು ಅವಕಾಶ ಕಲ್ಪಿಸುವ ನಿರ್ಣಯವನ್ನು ಅಂಗೀಕರಿಸಿತು. 1927 ರಲ್ಲಿ ಡಾ. ಅಂಬೇಡ್ಕರ್ ಅವರು ಮಹಾಡ್ ಸತ್ಯಾಗ್ರಹ ಆಂದೋಲನ ಮಾಡಿ ದಲಿತ ಸಮುದಾಯಕ್ಕೆ ಮೂಲಭೂತ ಮಾನವ ಹಕ್ಕುಗಳನ್ನು ಪಡೆಯಲು ಹೋರಾಟ ಮಾಡಿದರು. ಮಹದ್ ಚಳವಳಿಯ ಮೂಲಕ ಅಂಬೇಡ್ಕರ್ ದಲಿತರ ಮೇಲಿನ ಸಾಮಾಜಿಕ ತಾರತಮ್ಯವನ್ನು ಕೊನೆಗಾಣಿಸಲು ಬಯಸಿದ್ದರು. ಅಂಬೇಡ್ಕರರ ಅವಿರತ ಹೋರಾಟದಿಂದಾಗಿ ದಲಿತರಿಗೆ ಚೌಡಾರ್ ಕೆರೆ ನೀರು ಬಳಸಲು ಅವಕಾಶ ಪ್ರಾರಂಭವಾಯಿತು. ದಲಿತರ ಏಳಿಗೆಗಾಗಿ ಪಂಚಸೂತ್ರಗಳು: ಸ್ವ–ಸುಧಾರಣೆ, ಸ್ವ–ಏಳಿಗೆ, ಸ್ವಾಭಿಮಾನ, ಸ್ವಾವಲಂಬನೆ, ಸ್ವ–ನಂಬಿಕೆ.

**ಸಮಾನತೆಯ ತಳಹದಿಯ ಸಮಾಜದಲ್ಲಿ ನಂಬಿಕೆ**

ಊಳಿಗಮಾನ್ಯ ಅಸಮಾನತೆ ಮತ್ತು ಜಾತಿ ಪದ್ಧತಿಯ ಸಾಮಾಜಿಕ ಅನಿಷ್ಟಗಳನ್ನು ಬೇರು ಸಮೇತ ಕಿತ್ತೆಸೆದು ಸಮಾಜವನ್ನು ಪುನರ್ ನಿರ್ಮಾಣ ಮಾಡುವ ಉದ್ದೇಶದಿಂದ ಕಟುವಾಗಿ ಹೋರಾಡಿದರು. ಅವರು ಫ್ರೆಂಚ್ ಕ್ರಾಂತಿಯ ಆದರ್ಶಗಳ ಆಧಾರದ ಮೇಲೆ ಸುಧಾರಿತ ಸಮಾಜವನ್ನು ಬಯಸಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಆಧಾರದ ಮೇಲೆ ಭಾರತೀಯ ಸಮಾಜವನ್ನು ಜಾತಿ ವ್ಯವಸ್ಥೆಯಿಂದ ಮುಕ್ತಗೊಳಿಸಲು ಬಯಸಿದ್ದರು.

**ಸೈಮನ್ ಆಯೋಗಕ್ಕೆ ಬೇಡಿಕೆ**

ದಲಿತ ಸಮುದಾಯದ ಶೋಷಣೆ, ಸಮಸ್ಯೆ ನಿವಾರಿಸಬೇಕು ಮತ್ತು ರಾಜಕೀಯ ಅಧಿಕಾರ ನೀಡಬೇಕು. ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ, ನೌಕಾದಳ, ಸೇನಾಪಡೆಗಳಲ್ಲಿ ಹುದ್ದೆ ನೀಡಲು ಬೇಡಿಕೆ ಮಂಡಿಸಿದರು. ಅಸ್ಪೃಶ್ಯ ಪ್ರತಿನಿಧಿಗಳನ್ನು ನಾಮಕರಣ ಮಾಡುವ ಬದಲಿಗೆ ಚುನಾವಣೆ ಮೂಲಕ ಆಯ್ಕೆಮಾಡುವುದು. ದಲಿತರಿಗೆ ಹಾಸ್ಟೆಲ್ ವಸತಿ ಮೀಸಲಾತಿ ನೀಡಲು ಸಲಹೆ ಮಾಡಿದರು.

**ನಾಸಿಕ್ ಸತ್ಯಾಗ್ರಹ**

ನಾಸಿಕ್‌ನ ಕಾಲಾರಾಮ ದೇವಾಯಲಕ್ಕೆ ದಲಿತರ ಪ್ರವೇಶವನ್ನು ನಿರಾಕರಿಸಲಾಗಿತ್ತು. ಅಂಬೇಡ್ಕರ್ 10,000 ಸಾವಿರ ದಲಿತರೊಂದಿಗೆ ದೇವಾಲಯ ಪ್ರವೇಶಕ್ಕೆ ಸತ್ಯಾಗ್ರಹ ಪ್ರಾರಂಭಿಸಿದರು. ಒಂದು ತಿಂಗಳ ನಂತರ ದಲಿತರು ಮತ್ತು ಸವರ್ಣೀಯರ ಮಧ್ಯೆ ಒಪ್ಪಂದವಾಗಿ ದೇವಾಲಯ ರಥವನ್ನು ಒಟ್ಟಾಗಿ ಎಳೆಯಲು ನಿರ್ಣಯಿಸಲಾಯಿತು. ನಂತರ ನಡೆದ ಸಭೆಯಲ್ಲಿ ಶೂದ್ರರನ್ನು ದೇವಾಲಯದ ಅರ್ಚಕರಾಗಿ ನೇಮಿಸುವ ನಿರ್ಧಾರ ಮಾಡಲಾಯಿತು.

**ಅಮರಾವತಿ ಸತ್ಯಾಗ್ರಹ**

ಮಹಾರಾಷ್ಟ್ರದ ಅಂಬಾದೇವಿ ದೇವಾಲಯಕ್ಕೆ ದಲಿತರ ಪ್ರವೇಶ ಹಕ್ಕು ಒತ್ತಾಯಿಸಿ 3 ತಿಂಗಳ ಕಾಲ ಸತ್ಯಾಗ್ರಹ ಮಾಡಿ ಯಶಸ್ವಿಯಾದರು. ಪೂನಾದ ಪಾರ್ವತಿದೇವಿ ದೇವಾಲಯಕ್ಕೆ ದಲಿತರ ಪ್ರವೇಶಕ್ಕಾಗಿ ಹೋರಾಟ ಮಾಡಿದರು.

**ಹಿಂದುಳಿದವರ ರಾಜಕೀಯ ಉನ್ನತಿಗೆ ಶ್ರಮ**

ಅಂಬೇಡ್ಕರ್ ಅವರು ಭಾರತದಾದ್ಯಂತ ಒಂದು ವರ್ಗ ಚಳುವಳಿಯನ್ನು ಕ್ರಾಂತಿಕಾರಿ ಚಳುವಳಿಯಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಬ್ರಿಟಿಷರ ಆಳ್ವಿಕೆಯಲ್ಲಿ, 1930–32 ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಸಮ್ಮೇಳನದಲ್ಲಿ ದಲಿತ ಪ್ರತಿನಿಧಿಯಾಗಿ ಭಾಗವಹಿಸಿದರು. ದಲಿತರ ಸಮಸ್ಯೆ ಮತ್ತು ಅಸ್ಪೃಶ್ಯತೆಯನ್ನು ಕಾನೂನುಬದ್ಧವಾಗಿ ತೊಡೆದುಹಾಕುವಂತೆ ಕೇಳಿಕೊಂಡರು. ಅಲ್ಲಿ ಅವರು ದಲಿತ ಜನರಿಗೆ ಪ್ರತ್ಯೇಕ ಚುನಾಯಕ ಸಮುದಾಯಕ್ಕಾಗಿ ಒತ್ತಾಯಿಸಿದರು. ಸ್ವತಂತ್ರ ಭಾರತದಲ್ಲಿ ಹೊಸ ಸಂವಿಧಾನವನ್ನು ರಚಿಸಿದಾಗ, ಅಂಬೇಡ್ಕರ್ ಅವರು ಕರಡು ಸಮಿತಿಯ ಅಧ್ಯಕ್ಷರಾಗಿ ಭಾರತದಲ್ಲಿ ಹಿಂದುಳಿದ ಸಮುದಾಯದ ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಖಾತರಿಪಡಿಸಿದರು. ಇದು ಹಿಂದುಳಿದ ಸಮುದಾಯಗಳಿಗೆ ಉದ್ಯೋಗ, ಶಿಕ್ಷಣ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಪರಿಚಯಿಸಿತು.

**ಪೂನಾ ಒಪ್ಪಂದ–1932**

ದಲಿತರಿಗೆ ಬ್ರಿಟಿಷರು ನೀಡಿದ ಪ್ರತ್ಯೇಕ ಮತಕ್ಷೇತ್ರ ವಿರೋಧಿಸಿ ಗಾಂಧೀಜಿ ಪೂನಾದ ಯರವಾಡ ಜೈಲಿನಲ್ಲಿ 21 ದಿನ ಉಪವಾಸ ಸತ್ಯಾಗ್ರಹ ಆರಂಭಿಸಿದರು. ತನ್ನ ಸಮುದಾಯಕ್ಕೆ ನೀಡಿದ ಸವಲತ್ತುಗಳಿಗೆ ವಿರೋಧಿಸಿದ ಗಾಂಧೀಜಿ ನಡೆಯ ಬಗ್ಗೆ ಅಂಬೇಡ್ಕರರು ಖೇದ ವ್ಯಕ್ತಪಡಿಸಿದರು. ಅಂತಿಮವಾಗಿ ಅಂಬೇಡ್ಕರರು ಗಾಂಧೀಜಿಯವರನ್ನು ಭೇಟಿಯಾದರು. 1932 ರಲ್ಲಿ ಅವರಿಬ್ಬರ ಮಧ್ಯೆ ಪೂನಾ ಒಪ್ಪಂದವಾಯಿತು. ದಲಿತರಿಗೆ ನೀಡಿದ ಪ್ರತ್ಯೇಕ ಮತಕ್ಷೇತ್ರದ ಬದಲಿಗೆ ಪ್ರಾಂತೀಯ ಶಾಸಕಾಂಗಗಳಲ್ಲಿ ದಲಿತರಿಗೆ ಮೀಸಲಿಟ್ಟ ಸ್ಥಾನಗಳನ್ನು 71 ರಿಂದ 148 ಕ್ಕೆ ಹೆಚ್ಚಿಸಲಾಯಿತು. ಕೇಂದ್ರ ಶಾಸನ ಸಭೆಯಲ್ಲಿ 18% ಪ್ರತಿಶತ ಸ್ಥಾನಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ದಲಿತರಿಗೆ ಅವಕಾಶ ನೀಡುವುದು. ಅಸ್ಪೃಶ್ಯತೆ ನಿವಾರಣೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸೇರಿಸಿಕೊಂಡಿತು.

**ದಲಿತರಿಗಾಗಿ ತ್ರಿವಳಿ ಸೂತ್ರಗಳು: ಶಿಕ್ಷಣ, ಸಂಘಟನೆ, ಹೋರಾಟ.**

**ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪನೆ–1937**

ಸಣ್ಣ ರೈತರು, ರೈತ ಕೂಲಿಗಳು, ಗಿರಣಿ ಕಾರ್ಮಿಕರು, ಮತ್ತು ದಲಿತರನ್ನು ಶೋಷಣೆಯಿಂದ ಮುಕ್ತಮಾಡಲು 1937 ರಲ್ಲಿ ಬಾಂಬೆಯಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪಿಸಿದರು. ನಂತರ ಅದು ಅಖಿಲ ಭಾರತೀಯ ಪರಿಶಿಷ್ಟ ಜಾತಿಗಳ ಫೆಡರೇಷನ್ ಆಗಿ ಪರಿವರ್ತನೆಗೊಂಡಿತು–1942. ಅಂಬೇಡ್ಕರರು ರಾಷ್ಟ್ರೀಯ ಕಾರ್ಮಿಕ ಮಂಡಲಿಯ

ಅಧ್ಯಕ್ಷರಾಗಿದ್ದಾಗ ಗಣಿ ಕೈಗಾರಿಕಾ ಕಾನೂನು, ಕಲ್ಲಿದ್ದಲು ಗಣಿ ಕಾರ್ಮಿಕರ ಕಲ್ಯಾಣ ಸಮಿತಿ, ಅಸ್ತಿತ್ವಕ್ಕೆ ತಂದರು. ಕಾರ್ಮಿಕರ ಶೋಷಣೆಯ ವಿಮೋಚಕ ಎಂದು ಕರೆಯಲಾಯಿತು.

**ಜನತಾ ಶಿಕ್ಷಣ ಸಂಸ್ಥೆ ಸ್ಥಾಪನೆ**

ಅಂಬೇಡ್ಕರ್ ಅವರ ಶೈಕ್ಷಣಿಕ ಗುರಿಗಳನ್ನು ಅವರ ಸಾಮಾಜಿಕ ಉದ್ದೇಶಗಳೊಂದಿಗೆ ಸಂಯೋಜಿಸಲಾಗಿದೆ. ಜನಸಾಮಾನ್ಯರ ಶಿಕ್ಷಣದಿಂದ ಮಾತ್ರ ಸಾಮಾಜಿಕ ವಿಮೋಚನೆ ಸಾಧ್ಯ ಎಂದು ಅರಿತುಕೊಂಡರು. "ಶಿಕ್ಷಣ, ಸಂಘಟನೆ, ಹೋರಾಟ" ಎಂಬ ಘೋಷವಾಕ್ಯವು ಅಂಬೇಡ್ಕರ್ ಅವರ ಸಾಮಾಜಿಕ ಸುಧಾರಣೆಗಳ ಆಂದೋಲನದ ಸೈದ್ಧಾಂತಿಕ ತಳಹದಿಯನ್ನು ಸಾಕಾರಗೊಳಿಸಿತು. 1945 ರಲ್ಲಿ ಸ್ಥಾಪಿತವಾದ ಪೀಪಲ್ಸ್ ಎಜುಕೇಶನ್ ಸೊಸೈಟಿಯ ಬೆಂಬಲದ ಅಡಿಯಲ್ಲಿ, ಬಾಂಬೆ ಸಿದ್ದಾರ್ಥ ಕಾಲೇಜು–1946 ಹಾಗೂ ಔರಂಗಾಬಾದ್ ಮಿಲಿಂದ್ ಕಾಲೇಜು, ಹಾಸ್ಟೆಲ್ಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ಹಿಂದುಳಿದವರನ್ನು ಉನ್ನತೀಕರಿಸಲು ಸ್ಥಾಪಿಸಲಾಯಿತು. ದಲಿತರ ಏಳಿಗೆಗೆ ಶಿಕ್ಷಣವೇ ಮೂಲ ಸಾಧನ ಎಂದು ಕರೆ ನೀಡಿದರು.

**ಭೂಸುಧಾರಣೆಗಳು ಮತ್ತು ಆರ್ಥಿಕ ಸುಧಾರಣೆಗಳು**

ವ್ಯಾಪಕವಾದ ಭೂ ಸುಧಾರಣೆಗಳ ಅಗತ್ಯವನ್ನು ಮತ್ತು ಹಿಂದುಳಿದವರಿಗೆ ಸಾಮಾಜಿಕ ನ್ಯಾಯವನ್ನು ನೀಡುವುದು, ವಿಶೇಷವಾಗಿ ಭೂರಹಿತರಿಗೆ ಭೂಮಿ ಹಂಚಿಕೆ. ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಲು ಸಹಕಾರಿ ಸಂಘಗಳನ್ನು ರಚಿಸುವುದು, ಕೃಷಿ ಅಭಿವೃದ್ಧಿಯು ಉತ್ಪಾದಕತೆಯನ್ನು ಹೆಚ್ಚಿಸಲು ದೊಡ್ಡ ಬಂಡವಾಳ ಹೂಡಿಕೆಗೆ ಕರೆ. ಕೃಷಿಯಿಂದ ಹೆಚ್ಚುವರಿ ಕಾರ್ಮಿಕರನ್ನು ಇತರ ಉತ್ಪಾದಕ ಜೀವನೋಪಾಯಗಳಿಗೆ ಸ್ಥಳಾಂತರಿಸಲು ಕೈಗಾರಿಕೀಕರಣದ ಅಗತ್ಯವನ್ನು ಪ್ರತಿಪಾದಿಸಿದರು.

**ಸಂವಿಧಾನ ರಚನೆಯ ಶಿಲ್ಪಿ**

ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷತೆ (29–08–1947). ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ, ಸಂಸತ್ತು, ವಿಧಾನಸಭೆಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಸರ್ಕಾರಿ ನೌಕರಿಗಳಲ್ಲಿ ಶೇಕಡಾ 18% ರಷ್ಟು ಮೀಸಲಾತಿ ಸೌಲಭ್ಯವನ್ನು ಸಂವಿಧಾನದ ಮೂಲಕ ಅವಕಾಶ ಕಲ್ಪಿಸಿದರು. ಅಸ್ಪೃಶ್ಯತೆ ನಿಷೇಧ ಕಾಯಿದೆ– 1955 ಜಾರಿಗೆ ಬರಲು ಸ್ಫೂರ್ತಿಯಾದರು. ಹಕ್ಕುಗಳು, ಧರ್ಮ, ಭಾಷೆ, ಲಿಪಿ, ಸಂಸ್ಕೃತಿ, ಜಾತ್ಯಾತೀತ ಚಿಂತನೆ, ಒಕ್ಕೂಟ ಸರ್ಕಾರ ಪದ್ಧತಿ, ಸಂಸದೀಯ ಸರ್ಕಾರ ವ್ಯವಸ್ಥೆ, ರಾಜ್ಯ ನಿರ್ದೇಶಕ ತತ್ವಗಳು, ಏಕ ಪೌರತ್ವ, ಮೂಲಭೂತ ಹಕ್ಕುಗಳು ಇವರ ಕೊಡುಗೆಗಳಾಗಿವೆ.

**ಹಿಂದೂ ಕೋಡ್ ಬಿಲ್ ಮಂಡನೆ**

ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿ. ಹಿಂದೂ ಸಂಹಿತೆ ಮಸೂದೆ ಸಂಸತ್ತಿನಲ್ಲಿ ಮಂಡನೆ–1950. ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು, ವಿವಾಹ ವಿಚ್ಛೇದನ, ಲಿಂಗ ಸಮಾನತೆ, ಮಹಿಳಾ ಸಮಾನತೆ ಅಂಶಗಳನ್ನು ಒಳಗೊಂಡಿತು. ಸವರ್ಣೀಯರು ಅದನ್ನು ವಿರೋಧಿಸಿದಾಗ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ಅಂಬೇಡ್ಕರರು ಮಹಿಳೆಯರ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳು ಪ್ರಗತಿಪರವಾಗಿದ್ದವು.

**ಬೌದ್ಧ ಧರ್ಮ ಸ್ವೀಕಾರ–1956**

"ನಾನು ಹಿಂದೂವಾಗಿ ಹುಟ್ಟಿರುವೆ, ಆದರೆ ಹಿಂದೂವಾಗಿ ಸಾಯಲಾರೆ" ಎಂದು ಘೋಷಣೆ–1935. ಅಂಬೇಡ್ಕರ್ ಮತ್ತು ಅವರ ಪತ್ನಿ ಶಾರದಾ ಕಬೀರ್ ಹಾಗೂ ಅವರ 3,80,000 ಸಾವಿರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕಾರ–1956. ಅವರನ್ನು

ನವ ಬೌದ್ಧರೆಂದು ಕರೆಯಲಾಯಿತು. ಹಿಂದೂ ಧರ್ಮದಲ್ಲಿ ಹುಟ್ಟಿ ಹೋರಾಡಿದರು, ತನ್ನ ಜನತೆಗೆ ಸಮಾನತೆ ಸಿಗಲಿಲ್ಲವೆಂಬ ಕಾರಣಕ್ಕೆ ಸರ್ವ ಸಮಾನತೆಯ ಧರ್ಮವಾದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. 1956 ಡಿಸೆಂಬರ್ 06 ರಂದು ಪರಿನಿಬ್ಬಾಣ (ಪರಿನಿರ್ವಾಣ) ಹೊಂದಿದರು.

**ಉಪಸಂಹಾರ (CONCLUSION)**

ಭಾರತ ಸಂವಿಧಾನ ಶಿಲ್ಪಿ, ದಲಿತ ಸೂರ್ಯ, ಸಮತಾ ಶಿಲ್ಪಿ, ಭಾರತರತ್ನ, ಮಹಾನಾಯಕ, ವಿಶ್ವಜ್ಞಾನಿ, ದಲಿತ ವಿಮೋಚಕ. ಅಂಬೇಡ್ಕರ್ ಅವರು ದಲಿತರಿಗೆ ಮಾತ್ರವಲ್ಲದೆ ಕಾರ್ಮಿಕರು, ರೈತರು ಮತ್ತು ಮಹಿಳೆಯರನ್ನು ಒಳಗೊಂಡಿರುವ ಅಸಮಾನ ಸಾಮಾಜಿಕ ವ್ಯವಸ್ಥೆ ಮತ್ತು ತುಳಿತಕ್ಕೊಳಗಾದ ವರ್ಗದ ಮಾನವ ಹಕ್ಕುಗಳ ಹೋರಾಟಗಾರರಾಗಿ ಹೋರಾಡಿದರು. ಅಂಬೇಡ್ಕರ್ ಅವರು ಅಸಾಧಾರಣ ಸಮಾಜ ಸುಧಾರಕ, ತುಳಿತಕ್ಕೊಳಗಾದ ವರ್ಗಗಳ ವಿಮೋಚಕ, ವಿದ್ವಾಂಸ ಮತ್ತು ಶಿಕ್ಷಣತಜ್ಞ ಮತ್ತು ಮಾನವ ಹಕ್ಕುಗಳ ನಿಜವಾದ ನಾಯಕ. ಡಾ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಎಲ್ಲಾ ಭಾರತೀಯ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಪ್ರತಿಪಾದಿಸಿದ್ದಾರೆ. ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಕಾನೂನಿನ ಮುಂದೆ ಎಲ್ಲ ನಾಗರಿಕರೂ ಸಮಾನರು ಎನ್ನುವ ರೀತಿಯಲ್ಲಿ ಸಂವಿಧಾನವನ್ನು ರೂಪಿಸಿದರು.

**ಪರಾಮರ್ಶನ ಗ್ರಂಥಗಳು:**

1. ಚಿನ್ನಸ್ವಾಮಿ ಎನ್. ಸೋಸಲೆ, ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು.
2. ಹರೀಶ್ ಜಿ. ಬಿ., ಎಲ್ಲರಿಗೂ ಬೇಕಾದ ಅಂಬೇಡ್ಕರ್.
3. ಕಾಟ್ಕರ್ ಸರಜೂ, ದಲಿತ ಸೂರ್ಯ ಡಾ. ಬಾಬಾಸಾಹೇಬ ಅಂಬೇಡ್ಕರ್.
4. ಮಹಾಬಲೇಶ್ವರ ರಾವ್, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹೋರಾಟದ ಬದುಕಿನ ನೋಟ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.